## ಕ.ರಾ.ರ.ಸಾ.ನಿ.ದ ಇತಿಹಾಸ

ಅಂದಿನ ಮೈಸೂರು ರಾಜ್ಯ ಸರ್ಕಾರವು ರಾಜ್ಯದ ಸಾರ್ವಜನಿಕರಿಗೆ ಸಮರ್ಪಕ ಸಾರಿಗೆ ಸೌಲಭ್ಯಗಳನ್ನು ಒದಗಿಸಲು, ಮೈಸೂರು ಸರ್ಕಾರ ರಸ್ತೆ ಸಾರಿಗೆ ಇಲಾಖೆ (ಎಂ.ಜಿ.ಆರ್.ಟಿ.ಡಿ.) ಅನ್ನು ದಿನಾಂಕ 12-09-1948ರಂದು 120 ವಾಹನಗಳೊಂದಿಗೆ ಪ್ರಾರಂಭಿಸಲಾಯಿತು.

ರಾಜ್ಯ ರಸ್ತೆ ಸಾರಿಗೆಯು ಅಂದಿನ ಮೈಸೂರು ಸರ್ಕಾರದ ಒಂದು ಇಲಾಖೆಯಾಗಿ ಕಾರ್ಯ ನಿರ್ವಹಿಸುತ್ತಿದ್ದುದ್ದು, ತದನಂತರ ಒಂದು ಸ್ವತಂತ್ರ ಸಂಸ್ಥೆಯನ್ನಾಗಿ ರಸ್ತೆ ಸಾರಿಗೆ ನಿಗಮದ ಕಾಯಿದೆ 1950ರ ಸೆಕ್ಷನ್ 3ರಂತೆ ದಿನಾಂಕ 01-08-1961ರಂದು ಪರಿವರ್ತಿಸಲಾಯಿತು. ಬಿ.ಟಿ.ಎಸ್. ಅಂಗಸಂಸ್ಥೆಯ ಆಸ್ತಿ ಮತ್ತು ಋಣಭಾರಗಳನ್ನು ಹೊರತುಪಡಿಸಿ ದಿನಾಂಕ 01-08-1961ರಲ್ಲಿದ್ದ ಎಂ.ಜಿ.ಆರ್.ಟಿ.ಡಿ.ಯ ಆಸ್ತಿ ಮತ್ತು ಋಣಭಾರಗಳನ್ನು ಹೊಸ ಸಂಸ್ಥೆಗೆ ವರ್ಗಾಯಿಸಲಾಯಿತು ಹಾಗೂ ಸಂಸ್ಥೆಯನ್ನು ಎಂ.ಎಸ್.ಆರ್.ಟಿ.ಸಿ. ಎಂದು ನಾಮಕರಣ ಮಾಡಲಾಯಿತು. ಬಿ.ಟಿ.ಎಸ್. ಅಂಗಸಂಸ್ಥೆಯ ಆಸ್ತಿ ಮತ್ತು ಋಣಭಾರಗಳನ್ನು 01-10-1961ರಂದು ಎಂ.ಎಸ್.ಆರ್.ಟಿ.ಸಿ.ಗೆ ವರ್ಗಾಯಿಸಲಾಯಿತು. ಅದರಿಂದಾಗಿ ಇಡೀ ರಾಜ್ಯಕ್ಕೆ ಒಂದು ಸಂಸ್ಥೆಯನ್ನು ಸ್ಥಾಪಿಸಿದಂತಾಗಿದೆ.

ಪ್ರಾರಂಭದಲ್ಲಿ, ಪ್ರಯಾಣಿಕರ ಸಾರಿಗೆ ಸೇವೆಗಳನ್ನು 6 ವಿಭಾಗಗಳು – 5 ವಿಭಾಗಗಳು ಗ್ರಾಮಾಂತರ ಸೇವೆಗಳನ್ನು ಮತ್ತು 1 ವಿಭಾಗವು ಬೆಂಗಳೂರಿನ ನಗರ ಸಾರಿಗೆ ಸೇವೆಗಳನ್ನು-ಕಾರ್ಯಾಚರಿಸುತ್ತಿದ್ದವು. ಇದು 37 ಘಟಕಗಳು, 2 ಪ್ರಾದೇಶಿಕ ಕಾರ್ಯಾಗಾರಗಳು ಮತ್ತು ಬೆಂಗಳೂರಿನಲ್ಲಿ ಒಂದು ಕೇಂದ್ರ ಕಚೇರಿಯನ್ನು ಹೊಂದಿತ್ತು. 15 ಖಾಯಂ ಮತ್ತು 30 ತಾತ್ಕಾಲಿಕ ಬಸ್ ನಿಲ್ದಾಣಗಳು, 35 ರಸ್ತೆಯಂಚಿನ ಆಶ್ರಯದಾಣಗಳು ಮತ್ತು 104 ನಿಲುಗಡೆದಾಣಗಳಿದ್ದವು. ಒಟ್ಟಾರೆ 9705 ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದು, ಪ್ರತಿ ಅನುಸೂಚಿಗೆ ಸಿಬ್ಬಂದಿ ಅನುಪಾತ 9.43 ಆಗಿತ್ತು. 1029 ಅನುಸೂಚಿಗಳ ಕಾರ್ಯಾಚರಣೆಗೆ 1065 ಮಾರ್ಗಗಳಲ್ಲಿ 32134 ಮೈಲಿಗಳ ಮಾರ್ಗದೂರವನ್ನು ಹೊಂದಿ, ಸರಾಸರಿ ಪ್ರತಿದಿನ 127571 ಅನುಸೂಚಿ ಮೈಲುಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿತ್ತು. ಪರಸ್ಪರ ಒಪ್ಪಂದದ ಆಧಾರದ ಮೇಲೆ ನೆರೆರಾಜ್ಯಗಳಿಗೆ 40 ಅಂತರರಾಜ್ಯ ಮಾರ್ಗಗಳಲ್ಲಿ ಕಾರ್ಯಾಚರಣೆ ಮಾಡಲಾಗುತ್ತಿತ್ತು. (ಮಹಾರಾಷ್ಟ್ರ 29, ಗೋವಾ 1, ಆಂಧ್ರ ಪ್ರದೇಶ 7, ತಮಿಳುನಾಡು 2 ಮತ್ತು ಕೇರಳ 1). 1518 ವಾಹನಗಳನ್ನು ಹೊಂದಿದ್ದು ಸರಾಸರಿ ವಾಹನ ಬಳಕೆ 123.8 ಮೈಲಿಗಳಾಗಿತ್ತು. ಪ್ರತಿದಿನ ಸರಾಸರಿ 4.35 ಲಕ್ಷ ಪ್ರಯಾಣಿಕರನ್ನು ಕೊಂಡೊಯ್ಯಲಾಗುತ್ತಿತ್ತು. ಅವಘಡ ಪ್ರಮಾಣ ಮತ್ತು ಅಪಘಾತ ಪ್ರಮಾಣ ಅನುಕ್ರಮವಾಗಿ 1.88 ಮತ್ತು 1.19 ಆಗಿತ್ತು. ಪ್ರತಿ ಮೈಲಿಗೆ 161.6 ಪೈಸೆ ಆದಾಯವನ್ನು ಗಳಿಸಿ, ಪ್ರತಿ ಮೈಲಿಗೆ 127.2 ಪೈಸೆ ವೆಚ್ಚವನ್ನು ಭರಿಸಿ ಪ್ರತಿ ಮೈಲಿಗೆ 34.4 ಪೈಸೆ ಲಾಭ ಗಳಿಸಲಾಗಿತ್ತು.

## ಕ.ರಾ.ರ.ಸಾ.ಸಂಸ್ಥೆಯ ಬೆಳವಣಿಗೆ ಮತ್ತು ಪ್ರಗತಿ :

ವಿವಿಧ ಕ್ಷೇತ್ರಗಳಲ್ಲಿ ಕರ್ನಾಟಕವು ಸಾಧಿಸಿದ ತ್ವರಿತ ಅಭಿವೃದ್ಧಿಯ ಹಿನ್ನೆಲೆಯಲ್ಲಿ, ಕ.ರಾ.ರ.ಸಾ. ಸಂಸ್ಥೆಯು ಕನ್ನಡಿಗರ ಮತ್ತು ನೆರೆಯ ರಾಜ್ಯದವರ ಸಾರಿಗೆ ಬೇಡಿಕೆಗಳನ್ನು ಈಡೇರಿಸಲು ಅತ್ಯುತ್ತಮ ಸಂಸ್ಥೆಯಾಗಿ

ರೂಪುಗೊಂಡಿತು. 31-03-1997ರ ಅಂತ್ಯಕ್ಕೆ, ಸಂಸ್ಥೆಯು 19 ವಿಭಾಗಗಳಲ್ಲಿ ಕಾರ್ಯಾಚರಿಸುತ್ತಿದೆ. ಅವುಗಳಲ್ಲಿ 17 ವಿಭಾಗಗಳು ಗ್ರಾಮಾಂತರ ಸಾರಿಗೆ ವಿಭಾಗಗಳಾಗಿದ್ದು ಎರಡು ವಿಭಾಗಗಳು ಬೆಂಗಳೂರಿನಲ್ಲಿ ನಗರ ಸಾರಿಗೆ ಕಾರ್ಯಾಚರಣೆ ವಿಭಾಗಗಳಾಗಿತ್ತು. 108 ಘಟಕಗಳು, 2 ಪ್ರಾದೇಶಿಕ ಕಾರ್ಯಾಗಾರಗಳು ಮತ್ತು ಬೆಂಗಳೂರಿನಲ್ಲಿ ಒಂದು ಕೇಂದ್ರ ಕಚೇರಿಯನ್ನು ಹೊಂದಿತ್ತು. 281 ಖಾಯಂ ಮತ್ತು 11 ತಾತ್ಕಾಲಿಕ ಬಸ್ ನಿಲ್ದಾಣಗಳು, 337 ರಸ್ತೆಯಂಚಿನ ಆಶ್ರಯದಾಣಗಳು ಮತ್ತು 1009 ನಿಲುಗಡೆದಾಣಗಳನ್ನು ಹೊಂದಿತ್ತು. 59033 ಸಿಬ್ಬಂದಿಯನ್ನು ಹೊಂದಿದ್ದು, ಪ್ರತಿ ಅನುಸೂಚಿಗೆ ಸಿಬ್ಬಂದಿ ಪ್ರಮಾಣ 6.22ರಷ್ಟಿತ್ತು. 9493 ಅನುಸೂಚಿಗಳನ್ನು 13273 ಮಾರ್ಗಗಳಲ್ಲಿ 9.49 ಲಕ್ಷ ಕಿ.ಮೀ.ಗಳ ಮಾರ್ಗದೂರ ಹೊಂದಿ ಕಾರ್ಯಾಚರಿಸಲಾಗುತ್ತಿತ್ತು. ಹಾಗೂ ಸರಾಸರಿ ದೈನಂದಿನ ಅನುಸೂಚಿ ಕಿ.ಮೀ.ಗಳು 31.61 ಲಕ್ಷವಾಗಿತ್ತು. 602 ಅಂತರರಾಜ್ಯ ಮಾರ್ಗಗಳಲ್ಲಿ ಸಂಸ್ಥೆಯು ಪರಸ್ಪರ ಒಪ್ಪಂದದ ಮೇಲೆ ನೆರೆಯ ರಾಜ್ಯಗಳಿಗೆ ಕಾರ್ಯಾಚರಿಸಲಾಗುತ್ತಿತ್ತು. (ಮಹಾರಾಷ್ಟ್ರ 282, ಗೋವಾ 37, ಆಂಧ್ರ ಪ್ರದೇಶ 223, ತಮಿಳುನಾಡು 33 ಮತ್ತು ಕೇರಳ 27). ಒಟ್ಟು 10476 ವಾಹನಗಳನ್ನು ಹೊಂದಿದ್ದು, ಸರಾಸರಿ ವಾಹನ ಉಪಯುಕ್ತತೆ 299.6 ಕಿ.ಮೀ.ಗಳಾಗಿತ್ತು. ಪ್ರತಿ ದಿನ ಸರಾಸರಿ 57.82 ಲಕ್ಷ ಪ್ರಯಾಣಿಕರನ್ನು ಕೊಂಡೊಯ್ಯಲಾಗುತ್ತಿತ್ತು. ಅವಘಡ ಮತ್ತು ಅಪಘಾತ ಪ್ರಮಾಣ ಅನುಕ್ರಮವಾಗಿ 0.23 ಮತ್ತು 0.22 ಆಗಿತ್ತು. ಪ್ರತಿ ಕಿ.ಮೀ.ಗೆ 807.3 ಪೈಸೆ ಆದಾಯಗಳಿಸಿ, ಪ್ರತಿ ಕಿ.ಮೀ.ಗೆ 975.4 ಪೈಸೆ ಕಾರ್ಯಾಚರಣೆ ವೆಚ್ಚವನ್ನು ಭರಿಸಿ, ಪ್ರತಿ ಕಿ.ಮೀ. ಸಾರಿಗೆ ಆದಾಯಕ್ಕೆ 168.1 ಪೈಸೆ ನಷ್ಟವನ್ನು ಅನುಭವಿಸಿದೆ.

## ಕ.ರಾ.ರ.ಸಾ.ಸಂಸ್ಥೆಯ ವಿಭಜನೆ:

ಕಾರ್ಯಾಚರಣೆ ದಕ್ಷತೆಯನ್ನು ಸುಧಾರಿಸಲು, ಪ್ರಯಾಣಿಕರಿಗೆ ಉತ್ತಮ ಗುಣಮಟ್ಟದ ಸೇವೆಯನ್ನು ಒದಗಿಸಲು ಮತ್ತು ಕಾರ್ಯಾಚರಣೆಯ ಮೇಲೆ ಪರಿಣಾಮಕಾರಿ ಮೇಲ್ವಿಚಾರಣೆಯನ್ನು ಹೊಂದಲು, ಕರ್ನಾಟಕ ಸರ್ಕಾರವು ಸಂಸ್ಥೆಯನ್ನು ನಾಲ್ಕು ಪ್ರತ್ಯೇಕ ಸಂಸ್ಥೆಗಳನ್ನಾಗಿ ವಿಭಜಿಸಲು ತನ್ನ ಆದೇಶ ಸಂಖ್ಯೆ ಹೆಚ್‌ಟಿಡಿ 127/ಟಿಆರ್‌ಎ/96 ದಿನಾಂಕ 22-02-1997 ಅನ್ನು ಹೊರಡಿಸಿತು.

1996-97ರವರೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಅವಿಭಜಿತ/ಏಕೀಕೃತ ಸಂಸ್ಥೆಯಾಗಿ ಆಗಿತ್ತು. 1997-98ನೇ ಸಾಲಿನಲ್ಲಿ, ರಾಜ್ಯ ಸರ್ಕಾರವು ಕ.ರಾ.ರ.ಸಾ.ಸಂಸ್ಥೆಯಿಂದ ಎರಡು ಹೊಸ ಸಂಸ್ಥೆಗಳನ್ನು ಬೇರ್ಪಡಿಸಿ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಮತ್ತು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಇವುಗಳನ್ನು ಹೊಸದಾಗಿ ಪ್ರಾರಂಭಿಸಿದೆ. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಕೇಂದ್ರ ಕಚೇರಿಯು ಬೆಂಗಳೂರಿನಲ್ಲಿ ಮತ್ತು ವಾ.ಕ.ರ.ಸಾ.ಸಂಸ್ಥೆ ಕೇಂದ್ರ ಕಚೇರಿಯು ಹುಬ್ಬಳ್ಳಿಯಲ್ಲಿರುತ್ತದೆ. ಬೆಂ.ಮ.ನ.ಸಾ.ಸಂಸ್ಥೆ ದಿನಾಂಕ 15-08-1997ರಂದು ಅಸ್ತಿತ್ವಕ್ಕೆ ಬಂದಿದ್ದು ಬೆಂಗಳೂರು ನಗರದ ನಗರ ಸಾರಿಗೆ ಬೇಡಿಕೆಯನ್ನು ಪೂರೈಸಲಾಗುತ್ತಿದೆ. ದಿನಾಂಕ 01-11-1997ರಂದು ವಾ.ಕ.ರ.ಸಾ.ಸಂಸ್ಥೆ ಅಸ್ತಿತ್ವಕ್ಕೆ ಬಂದಿದ್ದು, ರಾಜ್ಯದ ವಾಯವ್ಯ ಭಾಗದ ಜಿಲ್ಲೆಗಳ ಸಾರಿಗೆ ಬೇಡಿಕೆಗಳಿಗನುಗುಣವಾಗಿ ಸೇವೆಯನ್ನು ಒದಗಿಸುತ್ತಿದೆ. ವಾ.ಕ.ರ.ಸಾ.ಸಂಸ್ಥೆ ದಿನಾಂಕ 01-04-1998ರಿಂದ ರಸ್ತೆ ಸಾರಿಗೆ ಕಾಯಿದೆ ಅಧಿನಿಯಮ 1982ರಂತೆ ಆರ್ಥಿಕವಾಗಿ ಸ್ವತಂತ್ರವಾಗಿದೆ. ಈ.ಕ.ರ.ಸಾ.ಸಂಸ್ಥೆ (ಪ್ರಸ್ತುತ ಕ.ಕ.ರ.ಸಾ.ನಿ.) ಎಂಬ ಮತ್ತೊಂದು ಸಂಸ್ಥೆಯನ್ನು ದಿನಾಂಕ 15-08-2000ರಂದು ಸ್ಥಾಪಿಸಲಾಯಿತು. ಅದರ ಕೇಂದ್ರ ಕಚೇರಿಯು ಕಲ್ಬುರ್ಗಿಯಲ್ಲಿದ್ದು, ರಾಜ್ಯದ ಈಶಾನ್ಯ ಜಿಲ್ಲೆಗಳ ಸಾರಿಗೆ ಬೇಡಿಕೆಗಳಿಗನುಗುಣವಾಗಿ ಸೇವೆಯನ್ನು ಒದಗಿಸುತ್ತಿದೆ. ಈ.ಕ.ರ.ಸಾ.ಸಂಸ್ಥೆಯು (ಪ್ರಸ್ತುತ ಕ.ಕ.ರ.ಸಾ.ನಿ.) ದಿನಾಂಕ 01-10-2000ರಿಂದ ಆರ್ಥಿಕವಾಗಿ ಸ್ವತಂತ್ರವಾಗಿದೆ.

## ಮರುರೂಪಿತ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಕಾರ್ಯಾಚರಣೆ




## ಪ್ರಸ್ತುತ ಸ್ಥಿತಿ (ಡಿಸೆಂಬರ್ – 2023ರಂತೆ):

ಕ.ರಾ.ರ.ಸಾ.ನಿಗಮವು ತನ್ನ ಕೇಂದ್ರ ಕಚೇರಿಯನ್ನು ಬೆಂಗಳೂರಿನಲ್ಲಿ ಹೊಂದಿದೆ. ಇದು ತನ್ನ ಕಾರ್ಯಾಚರಣೆ ವ್ಯಾಪ್ತಿಯಲ್ಲಿ ರಾಜ್ಯದ 17 ಜಿಲ್ಲೆಗಳನ್ನು ಒಳಗೊಂಡಿದೆ (ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಮಂಗಳೂರು, ಉಡುಪಿ, ಹಾಸನ, ಚಿಕ್ಕಮಗಳೂರು, ಕೊಡಗು, ಮೈಸೂರು, ಮಂಡ್ಯ, ಚಾಮರಾಜನಗರ). ನಿಗಮವು ಘಟಕ ಮಟ್ಟ, ವಿಭಾಗ ಮಟ್ಟ ಮತ್ತು ಕೇಂದ್ರ ಕಚೇರಿ ಮಟ್ಟ ಎಂದು ಒಟ್ಟಾರೆ 3 ಹಂತದ ವ್ಯವಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಪ್ರಸ್ತುತ ಒಟ್ಟು 16 ವಿಭಾಗಗಳನ್ನು– 15 ಕಾರ್ಯಾಚರಣೆ ವಿಭಾಗಗಳು (ಬೆಂಗಳೂರು ಕೇಂದ್ರ, ರಾಮನಗರ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ, ಚಿಕ್ಕಮಗಳೂರು, ಮಂಗಳೂರು, ಪುತ್ತೂರು, ದಾವಣಗೆರೆ, ಶಿವಮೊಗ್ಗ ಮತ್ತು ಚಿತ್ರದುರ್ಗ) ಮತ್ತು ಒಂದು ಬಸ್ ನಿಲ್ದಾಣ ವಿಭಾಗ ಅಂದರೆ ಬೆಂಗಳೂರಿನ ಕೆಂಪೇಗೌಡ ಬಸ್ ನಿಲ್ದಾಣ ವಿಭಾಗವನ್ನು ಹೊಂದಿರುತ್ತದೆ. 83 ಘಟಕಗಳು, 2 ಪ್ರಾದೇಶಿಕ ಕಾರ್ಯಾಗಾರಗಳು, 1 ಕೇಂದ್ರೀಯ ತರಬೇತಿ ಕೇಂದ್ರ, 4 ಪ್ರಾದೇಶಿಕ ತರಬೇತಿ ಕೇಂದ್ರ, 1 ಮುದ್ರಣಾಲಯ, ಹಾಗು 1 ಆಸ್ಪತ್ರೆಯನ್ನು ಸಹ ಹೊಂದಿರುತ್ತದೆ. ಪ್ರಸ್ತುತ ಸುಮಾರು 33932 ಕಾರ್ಮಿಕರನ್ನು ಹೊಂದಿರುತ್ತದೆ. 8360 ವಾಹನಗಳೊಂದಿಗೆ (48 ಖಾಸಗಿ ವಿದ್ಯುತ್ ಚಾಲಿತ ವಾಹನ ಸೇರಿದಂತೆ) ದೈನಂದಿನ 27.84 ಲಕ್ಷ ಕಿ.ಮೀಗಳನ್ನು ಕಾರ್ಯಾಚರಣೆ ಮಾಡಿ, ಪ್ರತಿ ದಿನ ರೂ. 1303.41 ಲಕ್ಷ ಸಾರಿಗೆ ಆದಾಯವನ್ನು ಗಳಿಸಿ, ಸರಾಸರಿ 35.39 ಲಕ್ಷ ಪ್ರಯಾಣಿಕರನ್ನು ಕೊಂಡೊಯ್ಯುತ್ತಿದೆ. ದೇಶದ ಇತರ ಸಾರಿಗೆ ನಿಗಮಗಳಿಗೆ ಹೋಲಿಸಿದರೆ ನಿಗಮವು ಗಾತ್ರದಲ್ಲಿ ಐದನೇ ಸ್ಥಾನದಲ್ಲಿದೆ. ನಿಗಮವು ವಿದ್ಯುತ್‌ಚಾಲಿತ ಬಸ್ಸು 'ಇವಿ ಪವರ್ ಪ್ಲಸ್' ಕಾರ್ಯಾಚರಣೆಯನ್ನು 16.01.2023ರಿಂದ ಜಿ.ಸಿ.ಸಿ. ಆಧಾರದ ಮೇಲೆ ಪ್ರಾರಂಭಿಸಿದೆ.

# ಕ.ರಾ.ರ.ಸಾ.ನಿಗಮದ ಪ್ರಮುಖ ಅಂಕಿಅಂಶಗಳು (ಡಿಸೆಂಬರ್–2023ರಂತೆ)

| | | |
|---|---|---|
| 1 | ಘಟಕಗಳು | 83 |
| 2 | ವಿಭಾಗಗಳು | 16 |
| 3 | ಬಸ್ ನಿಲ್ದಾಣಗಳು | 175 |
| 4 | ವಾಹನಗಳು | 8360 |
| 5 | ಅನುಸೂಚಿಗಳು | 7638 |
| 6 | ದೈನಂದಿನ ಸರಾಸರಿ ಪರಿಣಾಮಕಾರಿ ಕಿ.ಮೀ. | 27.84 ಲಕ್ಷ |
| 7 | ದೈನಂದಿನ ಸರಾಸರಿ ಸಾರಿಗೆ ಆದಾಯ | ರೂ. 1303.41 ಲಕ್ಷ |
| 8 | ಪ್ರತಿದಿನ ಸಂಚರಿಸಿದ ಸರಾಸರಿ ಪ್ರಯಾಣಿಕರು | 35.39 ಲಕ್ಷ |
| 9 | ಸಿಬ್ಬಂದಿ | 33932 |
| 10 | ಪ್ರತಿ ಅನುಸೂಚಿಗೆ ಸಿಬ್ಬಂದಿ ಪ್ರಮಾಣ | 4.44 |

73546/2024

12-01-2024

# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
# ಕೇಂದ್ರ ಕಚೇರಿ : ಬೆಂಗಳೂರು

ಗೆ
ಉಪಮುಖ್ಯ ಗಣಕ ವ್ಯವಸ್ಥಾಪಕರು,
ಕ.ರಾ.ರ.ಸಾ. ನಿಗಮ, ಕೇಂದ್ರ ಕಚೇರಿ,
ಬೆಂಗಳೂರು.

ಮಾನ್ಯರೆ,

ವಿಷಯ: ವೆಬ್‌ಸೈಟ್ ಮಾಹಿತಿಗಳ ಬದಲಾವಣೆ.ಸೇರ್ಪಡೆ ಕುರಿತು.
ಉಲ್ಲೇಖ: 1) ಸಂ/ಕರಾಸಾ/ಕೇಂಕ/ಮಾತಂ/482/2018-19
ದಿನಾಂಕ 07-08-2018
2) ಸಂ/ಕರಾಸಾ/ಕೇಕ/ಮಾತಂ/648/2019-20
ದಿನಾಂಕ 03-01-2020.

****

ಉಲ್ಲೇಖಿತ ಪತ್ರಗಳಲ್ಲಿ ಕೋರಿರುವಂತೆ, ಯೋಜನಾ ಮತ್ತು ಅಂಕಿಅಂಶ ಇಲಾಖೆಗೆ ಸಂಬಂಧಿಸಿದಂತೆ ಇತಿಹಾಸ ಹಾಗೂ ಪ್ರಮುಖ ಅಂಕಿಅಂಶಗಳ ಅಪ್‌ಡೇಟೆಡ್ ಮಾಹಿತಿಯನ್ನು (ಆಂಗ್ಲ ಹಾಗೂ ಕನ್ನಡ ಭಾಷೆಯಲ್ಲಿ) ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಈ ಮೂಲಕ ಕಳುಹಿಸಲಾಗಿದೆ.

ತಮ್ಮ ವಿಶ್ವಾಸಿ
VEENA DESAI
ಮುಖ್ಯ ಯೋಜನಾ ಮತ್ತು ಸಂಖ್ಯಾಧಿಕಾರಿ

ಅಡಕ: ಮೇಲಿನಂತೆ

# History of KSRTC

In order to cater to the transport needs of the travelling public of the then state of Mysore, Mysore Government Road Transport Department(MGRTD) was inaugurated with 120 buses on 12th September 1948.

The State Transport, which was being administered as a Department of the Govt. of Mysore was subsequently converted into an independent Corporation under Section 3 of the Road Transport Corporation Act, 1950 on 1st of August 1961. The assets and liabilities of MGRTD except those of BTS unit as on 01-08-1961 were passed on to the new Corporation, which was named as MSRTC. The assets and liabilities of the residual MGRTD i.e. of BTS Unit were subsequently passed on to the Corporation on 1st of October 1961. Thus, a Corporation was ultimately established for the entire State of Mysore.

At the beginning, the passenger transport services were operated in 6 Divisions- 5 Divisions operating mofussil services and 1 Division operating city services of Bangalore. It had 37 Depots, 2 Regional Workshops and a Central Office at Bangalore. There were 15 permanent and 30 temporary bus stations with 35 wayside shelters and 104 pick-up shelters. The total number of employees deployed was 9705 and the staff ratio per schedule was 9.43. The total number of routes operated was 1065 with 1029 schedules and route length of 32,134 miles, average daily scheduled mileage being 127571. The total number of inter-state routes operated by the Corporation on a reciprocal basis with the neighbouring States were 40 ie., 29 in Maharashtra, 1 in Goa, 7 in Andhra Pradesh, 2 in Tamilnadu and 1 in Kerala. The total number of vehicles held was 1518 with average vehicle utilisation of 123.8 miles. The average number of passengers carried per day was 4.35 lakh. The rate of breakdown was 1.88 and that of accident was 1.19. Earning per Mile (EPM) realized was 161.6 Ps., and Cost per Mile (CPM) was 127.2 Ps., resulting in net profit margin of 34.4 Ps/mile.

## Growth and Progress of KSRTC:

Along with the rapid progress of Karnataka in all spheres of activity, KSRTC has emerged as the best organisation in meeting the aspirations of Kannadigas and the people of neighbouring states of Karnataka. As at the end of 31-03-1997, the Corporation operated its services in 19 Divisions - 17 Divisions operating mofussil services and 2 Division operating city services of Bangalore. It had 108 Depots, 2 Regional Workshops and a Central Office at Bangalore. There were 281 permanent

and 11 temporary bus stations with 337 wayside shelters and 1009 pick-up shelters. The total number of employees deployed was 59033 and the staff ratio per schedule was 6.22. The total number of routes operated was 13273 with 9493 schedules, route length of 9.49 lakh Kms. and average daily scheduled kms of 31.61 lakh kms. The total number of inter-state routes operated by the Corporation on a reciprocal basis with the neighbouring states were 602 ie., 282 in Maharashtra, 37 in Goa, 223 in Andhra Pradesh, 33 in Tamilnadu and 27 in Kerala. The total number of vehicles held was 10476 with average vehicle utilisation of 299.6 Kms. The average number of passengers carried per day was 57.82 lakh. The rate of breakdown was 0.23 and the rate of accident was 0.22. EPKM realized was 807.3 Ps. and CPKM was 975.4 Ps., resulting in net loss margin of 168.1 Ps./Km. on traffic revenue.

## Bifurcation of KSRTC:

To increase operational efficiency, to provide quality transport service to the traveling public and to have an effective supervision on the operations of the Corporation, the Government of Karnataka ordered for bifurcation of KSRTC into 4 separate Corporations vide its order No.HTD 127 TRA 96 dated 22-02-1997.

Thus, KSRTC was a monolithic State Road Transport Undertaking till 1996-97. Thereafter, during the year 1997-98, the State Government divided KSRTC and carved out two new Corporations, viz., the Bangalore Metropolitan Transport Corporation(BMTC) with its corporate office at Bangalore and the North West Karnataka Road Transport Corporation, with its corporate office at Hubli. The Bangalore Metropolitan Transport Corporation which came into being on 15-08-1997 caters exclusively to the city of Bangalore. And the North West Karnataka Road Transport Corporation which came into being with effect from 01-11-1997 caters to the north western districts of Karnataka. NWKRTC became financially independent w.e.f. 01-04-1998 under RTC Act 1982. One more new Corporation called the North East Karnataka Road Transport Corporation was also established with effect from 5-08-2000 with its head quarters at Gulbarga to cater to the north eastern districts of Karnataka, which became financially independent w.e.f. 01-10-2000.

# Restructured STU Operations




## Present Status (Month of Dec -2023):

KSRTC has its Corporate office at Bangalore. Presently, it covers seventeen Districts (Bangalore Urban, Bangalore Rural, Ramanagar, Kolar, Chickballapur, Tumkur, Chitradurga, Davanagere, Shivamogga, Mangalore, Udupi, Chickmagalur, Hassan, Mysore, Mandya, Chamarajnagar, Coorg) in the State under its operational jurisdiction. The Corporation functions in 3 – tier system, i.e., Corporate office, Division office and Depots. There are totally 16 Divisions - 15 operating Divisions viz. Bangalore Central, Ramanagar, Tumkur, Kolar, Chickballapur, Mysore, Mandya, Chamarajnagar, Hassan, Chickmagalur, Mangalore, Puttur, Davanagere, Shivamogga, Chitradurga and 1 bus station division viz., Kempegowda Bus Station at Bangalore. There are 83 Depots, 2 Regional Workshops, 1 Central Training Institute, 4 Regional Training Institutes, 1 Printing Press and 1 Hospital. KSRTC has a workforce of about 33932 employees. It operates on an average 27.84 lakh kms daily with a fleet size of 8360 vehicles (including 48 Electric vehicles) and earns traffic revenue of Rs. 1303.41 lakh daily by catering to 35.39 lakh passengers on an average. It stands 5$^{th}$ amongst STUs in the nation by size. KSRTC started operation of electric bus "EV Power Plus" on GCC (Gross Cost Contract) model with effect from 16$^{th}$ January 2023.

# KSRTC Key Statistics (Month of Dec -2023)

| | | |
|---|---|---|
| 1 | Depots | 83 |
| 2 | Divisions | 16 |
| 3 | Bus stations | 175 |
| 4 | Vehicles | 8360 |
| 5 | Schedules | 7638 |
| 6 | Effective Kms per day | 27.84 lakh |
| 7 | Average traffic revenue per day | Rs. 1303.41 lakh |
| 8 | Average passengers travelled per day | 35.39 lakh |
| 9 | Staff | 33932 |
| 10 | Staff ratio per schedule | 4.44 |